**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 94/2020**

**ಚಾ.ಸಾಃ1, ಫ್ರಾ.ಸಾಃ1**

| | |
|---|---|
| ಸಾಕ್ಷಿದಾರನ ಹೆಸರು | ಮಾಣಿಕ್ಯ ನಾಯ್ಕ |
| ಗಂಡನ ಹೆಸರು | ನಂಬಿಯಾರ ನಾಯ್ಕ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ಕೂಲಿ |
| ವಾಸ್ತವ್ಯ | ಕೆಕ್ಕಾರ, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 06-08-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಕೆಕ್ಕಾರ ಕ್ರಾಸಿನಲ್ಲಿರುವ ನಮ್ಮ ಸ್ವಂತ ಮನೆಯಲ್ಲಿ ನಾನೊಬ್ಬಳೇ ವಾಸ ಮಾಡುತ್ತಿದ್ದೇನೆ.

ನಾನು 2-3 ವರ್ಷಗಳ ಹಿಂದೆ ಡಿಸೆಂಬರ್ ತಿಂಗಳ 24ನೇ ತಾರೀಕಿನಂದು ಗೋವಾದ ಮಡಗಾಂವನಲ್ಲಿರುವ ನನ್ನ ಸ್ನೇಹಿತರಾದ ಸರಿತಾರವರ ಮನೆಗೆ ಕ್ರಿಸ್‌ಮಸ್ ಹಬ್ಬ ಆಚರಣೆ ಮಾಡಲು ಹೋಗಿದ್ದೆ. ನಮ್ಮ ಮನೆಯ ಮುಂಬಾಗಿಲಿಗೆ ಬೀಗ ಹಾಕಿ ಹೋಗಿದ್ದೆ. ನನ್ನ ಮಗಳಾದ ಚಾಸಾ-8 ಸವಿತಾರವರು ಚಂದಾವರ ನಾಕಾದಲ್ಲಿ ವಾಸ ಮಾಡುತ್ತಾರೆ. ನಮ್ಮ ಮನೆಯ ಪಕ್ಕದಲ್ಲಿರುವ ಪಕ್ಕದ ಮನೆಯವರು ಚಾಸಾ-9 ಕಾರ್ಮೆಲಿನ್‌ರವರು ನಮ್ಮ ಮನೆಯಲ್ಲಿ ಕಳ್ಳತನವಾಗಿರುವುದಾಗಿ 26ನೇ ತಾರೀಕಿನಂದು ನನ್ನ ಮಗಳಿಗೆ ಹೇಳಿರುತ್ತಾರೆ. ನನ್ನ ಮಗಳು ನನಗೆ ತಿಳಿಸಿರುತ್ತಾಳೆ. ನಾನು 28ನೇ ತಾರೀಕಿನಂದು ಸುಮಾರು ಮಧ್ಯಾಹ್ನ 12-00ರ ಸಮಯಕ್ಕೆ ಮನೆಯ ಬಳಿ ಬಂದು ನೋಡಲಾಗಿ ನಮ್ಮ ಮನೆಯ ಎರಡೂ ಬಾಗಿಲುಗಳಿಗೆ ನಾನು ಹಾಕಿದ್ದ ಬೀಗಗಳನ್ನು ಒಡೆಯಲಾಗಿತ್ತು. ಕಪಾಟನ್ನು ಸಹ ಒಡೆದಿದ್ದು ಅದರ ಒಳಗೆ ಇಟ್ಟಿದ್ದ ಒಂದು ಬಂಗಾರದ ಜುಮುಕಿ ಮುತ್ತು ಕುಡುಕು, ಒಂದು ಖಾಲಿ ಜುಮುಕಿ, ಒಂದು ಉಂಗುರ ಮತ್ತು ರೂ.10,000-00 ನಗದು ಇರಲಿಲ್ಲ. ಅವುಗಳನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದರು. ನಾನು ಪೋಲಿಸರಿಗೆ ದಿನಾಂಕ 28ಕ್ಕೆ ಪಿರ್ಯಾದು ನೀಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಿರ್ಯಾದನ್ನು ಗುರುತಿಸಿದ್ದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1ರ ಮೇಲಿನ ಹೆಬ್ಬೆಟ್ಟಿನ ಗುರುತನ್ನು ತನ್ನದು ಎಂದು ತಿಳಿಸಿದ್ದರಿಂದ ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಪಿರ್ಯಾದು ನೀಡಿದ ದಿನ ಪೋಲಿಸರು ನಮ್ಮ ಮನೆಗೆ ಬಂದಿದ್ದರು. ಆ ಸಂದರ್ಭದಲ್ಲಿ ಚಾಸಾ-2 ಕೃಷ್ಣ ಮತ್ತು ಅಪ್ಪಿ ಎನ್ನುವ ಇನ್ನೊಬ್ಬರು ಬಂದಿದ್ದರು. ಪೋಲಿಸರಿಗೆ ಮನೆಯನ್ನು ನಾನು ತೋರಿಸಿರುತ್ತೇನೆ. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಛಾಯಾಚಿತ್ರ ತೆಗೆಸಿರುತ್ತಾರೆ. ಸಾಕ್ಷಿ ಛಾಯಾಚಿತ್ರಗಳನ್ನು ಗುರುತಿಸಿದ್ದರಿಂದ ಅವುಗಳನ್ನು ನಿಪಿ-2 ರಿಂದ 4 ಎಂದು ಗುರುತಿಸಲಾಯಿತು.

8 ತಿಂಗಳ ನಂತರ ಪೋಲಿಸರು ಬಂಗಾರವನ್ನು ಗುರುತಿಸಲು ಠಾಣೆಗೆ ಕರೆಸಿದ್ದರು. ನಾನು ಠಾಣೆಗೆ ಹೋದಾಗ ಪೋಲಿಸರು ಜುಮುಕಿ, ಉಂಗುರ ತೋರಿಸಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಪ್ರಕರಣದಲ್ಲಿ ಹಾಜರು ಮಾಡಿರುವ ಮತ್ತು ನ್ಯಾಯಾಲಯದ ಮುಂದೆ ಇರುವ ಒಂದು ಜೊತೆ ಕುಡುಕುಗಳ ಜೊತೆ ಇರುವ ಓಲೆಗಳನ್ನು ಹಾಗೂ ಒಂದುಜೊತೆ ಜುಮುಕಿಗಳನ್ನು ತೋರಿಸಲಾಗಿ ಜುಮುಕಿಯು ತನ್ನ ಮನೆಯಲ್ಲಿ ಕಳ್ಳತನವಾದ ಆಭರಣವಲ್ಲ ಮತ್ತು ಒಂದು ಜೊತೆ ಕುಡುಗಳ ಜೊತೆ ಇರುವ ಓಲೆಯು ತನ್ನದು ಎಂದು ತಿಳಿಸಿರುತ್ತಾರೆ. ಆದ್ದರಿಂದ ಕುಡುಕುಗಳ ಜೊತೆ ಇರುವ ಒಂದು ಜೊತೆ ಓಲೆಯನ್ನು ಮುಮಾ-1 ನ್ನು ಗುರುತಿಸಲಾಯಿತು.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ನ್ಯಾಯಾಲಯದ ಮುಂದೆ ಇರುವ ಒಂದು ಜೊತೆ ಜುಮುಕಿ ಸಹ ನಮ್ಮ ಮನೆಯಲ್ಲಿ ಕಳ್ಳತನವಾಗಿರುವ ಆಭರಣ ಎಂದರೆ ಸರಿ. ಸದರಿ ಆಭರಣವನ್ನು ತನ್ನ ಮನೆಯಲ್ಲಿ ಕಳ್ಳತನವಾಗಿರುವ ಆಭರಣ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ಮುಮಾ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಕೃಷ್ಣ ವಿ. ನಾಯ್ಕರಿಂದಃ**

ನನ್ನ ಮನೆಯ ಅಕ್ಕಪಕ್ಕ ಮನೆಗಳಿವೆ ಎಂದರೆ ಸರಿ. ನಾನು ಮಡಗಾಂವ್‌ಗೆ ಹೋಗುವಾಗ ಅಕ್ಕಪಕ್ಕದವರಿಗೆ ಹೇಳಿರಲಿಲ್ಲ. ಮನೆಯ ಚಾವಿಯನ್ನು ನಾನು ತೆಗೆದುಕೊಂಡು ಹೋಗಿದ್ದೆ. 26 ನೇ ತಾರೀಕಿನಂದು ರಾತ್ರಿ 08-00 ರ ಸಮಯಕ್ಕೆ ಮಗಳು ನನಗೆ ಫೋನ್ ಮಾಡಿ 25 ನೇ ತಾರೀಕಿನಂದು ಕಳ್ಳತನವಾಗಿರುವುದಾಗಿ ಹೇಳಿರುತ್ತಾಳೆ. ನಾನು ಬರುವ ಪೂರ್ವದಲ್ಲಿ ನನ್ನ ಮಗಳು ಪಿರ್ಯಾದು ನೀಡಿರುವುದಿಲ್ಲ. ಕಳ್ಳತನದ ಸಂಗತಿಯನ್ನು ನನ್ನ ಮಗಳು ಪೋಲಿಸರಿಗೆ 26 ನೇ ತಾರೀಕಿನಂದು ತಿಳಿಸಿರುತ್ತಾಳೆ. ನನ್ನ ಮಗಳು ಫೋನ್ ಮಾಡಿದ ನಂತರ ನಾನು ಮನೆಗೆ ಬರುವದಕ್ಕೆ ಮೊದಲೇ ಪೋಲಿಸರು ಗುನ್ನಾ ಸ್ಥಳಕ್ಕೆ ಭೇಟಿ ನೀಡಿದ್ದರಂತೆ.

ಮಡಗಾಂವ್‌ನಿಂದ ನಾನು ಮನೆಗೆ ಬಂದು ಪರಿಶೀಲಿಸಿದ ನಂತರ ಪಿರ್ಯಾದು ನೀಡಿರುತ್ತೇನೆ. ನಾನು 27 ನೇ ತಾರೀಕಿನಂದು ಮಧ್ಯಾಹ್ನ ಬಂದಿರುತ್ತೇನೆ. ಸಾಯಂಕಾಲ 04-00 ರ ಸಮಯಕ್ಕೆ ನಾನು ಠಾಣೆಗೆ ಹೋಗಿ ಪಿರ್ಯಾದು ನೀಡಿರುತ್ತೇನೆ. ನಾನು 27 ನೇ ತಾರೀಕಿನಂದು ಬಂದ ದಿನವೇ ಪೋಲಿಸರು ಬೆಳಿಗ್ಗೆ 10-00 ರ ಸಮಯಕ್ಕೆ ನಮ್ಮ ಮನೆಗೆ ಬಂದಿದ್ದರು. ನಾನು ಬರುವ ಪೂರ್ವದಲ್ಲೇ ಪೋಲಿಸರು ಮನೆಯೊಳಗೆ ಹೋಗಿ ಪಂಚನಾಮೆ ಮಾಡಿರುತ್ತಾರೆ. ಆಭರಣಗಳನ್ನು ನಾನು ತಲೆಗೆ ಹಾಕಿಕೊಳ್ಳುವ ದಿಂಬಿನ ಒಳಗೆ ಇಟ್ಟಿದ್ದ. ಸದರಿ ದಿಂಬನ್ನು ಕಾಟಿನ ಮೇಲೆ ಇಟ್ಟಿದ್ದೆ. ಪಂಚರನ್ನು ಸ್ಥಳಕ್ಕೆ ಪೋಲಿಸರು ಕರೆಸಿದ್ದರು. ನಾನು ಮನೆಗೆ ಬರುವಷ್ಟರಲ್ಲಿ ಪೋಲಿಸರು ಹೊರಟು ಹೋಗಿದ್ದರು. ಪಿರ್ಯಾದು ನೀಡಿದ ನಂತರ ಪೋಲಿಸರು ನನ್ನ ಮನೆಯ ಬಳಿ ಬಂದಿರುವುದಿಲ್ಲ. ನಾನು ಠಾಣೆಗೆ

**ಚಾ.ಸಾಃ1, ಫ್ರಾ.ಸಾಃ1**

ಹೋದಾಗ ಆಭರಣಗಳು ಟೇಬಲ್ ಮೇಲೆ ಇದ್ದವು. ಠಾಣೆಗೆ ಹೋದಾಗ ಉಂಗುರ ಇರಲಿಲ್ಲ. ಠಾಣೆಗೆ ನಾನು, ನನ್ನ ಮಗಳು ಮತ್ತು ಅಳಿಯ ಹೋಗಿದ್ದೆವು. ಸದರಿ ದಿನದಂದು ನಾನು ಠಾಣೆಗೆ ಹೋಗಿಲ್ಲ, ಪೋಲಿಸರು ಮುಮಾ-1 ಮತ್ತು 2 ನ್ನು ನನಗೆ ತೋರಿಸಿಲ್ಲ ಮತ್ತು ಅವುಗಳನ್ನು ನಾನು ಗುರುತಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ ಬಂಗಾರದ ಆಭರಣಗಳು ಮತ್ತು ನಗದು ಹಣ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಭೇಟಿ ನೀಡಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**